ಓ.ಎಸ್.ನಂಃ 284/2021

ಪಿಡಬ್ಲ್ಯೂ-1

<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 12.06.2024 ರಂದು ಪ್ರಮಾಣಿಕರಿಸಲಾಯಿತು.</u>

<u>ಪಾಟೀ ಸವಾಲು: ಶ್ರೀ ಟಿ ಎಸ್ ವಿ ವಕೀಲರಿಂದಃ</u>

ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತು. ನನ್ನ ತಂದೆ ಹೆಸರು ಮಾದನಾಯಕ. ನನ್ನ ತಾತನ ಹೆಸರು ಸಹ ಮಾದನಾಯಕ. ನನ್ನ ತಾತನ ಹೆಸರು ಕೇಲಗರ ಹೊಣಕಾರನಾಯಕ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಕೇಲಿಗರ ಹೊಣಕಾರನಾಯಕರವರು ನನ್ನ ತಂದೆಯ ಸಾಕು ತಂದೆ ಆಗಿರುತ್ತಾರೆ. ನನ್ನ ತಂದೆಯ ಕುಟುಂಬದ ಪಡಿತರ ಚೀಟಿ, ಆಧಾರ್ ಕಾರ್ಡ್ ಮತ್ತು ಇತರೆ ದಾಖಲೆಗಳಲ್ಲಿ ನನ್ನ ತಂದೆಯ ತಂದೆ ಹೆಸರು ಕೇಲಿಗರ ಹೊಣಕಾರನಾಯಕ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕೇಲಿಗರ ಹೊಣಕಾರನಾಯಕ ರವರು ನನ್ನ ತಾತನ ತಂಗಿಯನ್ನು ವಿವಾಹ ಆಗಿದ್ದರು ಎಂದರೆ ಸರಿ. ನನ್ನ ತಂದೆಯ ತಂದೆ ಹೆಸರು ಮಾದನಾಯಕ, ನನ್ನ ತಂದೆ ಮಾದನಾಯಕರವರು ನಮ್ಮ ತಾತ ಮಾದನಾಯಕರವರ ಒಟ್ಟು ಕುಟುಂಬದಲ್ಲಿ ಸದಸ್ಯನಾಗಿದ್ದರು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ವಂಶವೃಕ್ಷ ಪ್ರಮಾಣ ಪತ್ರವನ್ನು ಸಹ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಹಾಜರು ಮಾಡಿರುವ ದಾಖಲೆಯಲ್ಲಿ ನನ್ನ ತಂದೆಯ ತಾತ ಮಾದನಾಯಕ ಒಟ್ಟು ಕುಟುಂಬದ ಸದಸ್ಯ ಎಂದು ತೋರಿಸಲು ವಂಶವೃಕ್ಷ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಹಾಜರು ಮಾಡಿಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸರ್ವೇ ನಂಃ 228/2 ರ ವಿಸ್ತೀರ್ಣ 2 ಎಕರೆ 19 ಗುಂಟೆ ನನ್ನ ತಾಯಿ ಹೆಸರಿನಲ್ಲಿದೆ ಎಂದರೆ ಸರಿ. ನನ್ನ ತಾಯಿ ಸದರಿ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿ. ನನಗೆ ಓದಲು ಬರೆಯಲು ಬರುತ್ತದೆ.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಸದರಿ ದಾಖಲೆ ಆರ್ ಟಿ ಸಿ ಸರ್ವೇ ನಂಃ 157/1 ಆಗಿದ್ದು, ಅದರಲ್ಲಿ ಕಲಂ ನಂಃ12 ರಲ್ಲಿ ಕೇಲಿಗರ ಹೊಣಕಾರನಾಯಕ ದತ್ತು ಮಗ ಮಾದನಾಯಕ ಎಂದು ನಮೂದು ಮಾಡಿದೆ ಎಂದು ಸಾಕ್ಷಿ ಒಪ್ಪಿಕೊಂಡ ಕಾರಣ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ಸರ್ವೇ ನಂಃ 228/2 ರ 2 ಎಕರೆ 19 ಗುಂಟೆ, ಸರ್ವೇ ನಂಃ 158/1 ರ 20 ಗುಂಟೆ, ಸರ್ವೇ ನಂಃ 157/3, 20

ಗುಂಟೆ, ಸರ್ವೇ ನಂಃ 214/1 ರ 3 ಎಕರೆ 31 ಗುಂಟೆ ಜಮೀನು ಆಸ್ತಿಗಳ ಖಾತೆ ನನ್ನ ತಾಯಿ, ನನ್ನ ಅಕ್ಕಂದಿರ ಹೆಸರಿನಲ್ಲಿ ಇದೆ ಎಂದರೆ ಸರಿ. ನನ್ನ ತಾತ ಮಾದನಾಯಕ ಮತ್ತು ಚಿಕ್ಕಮ್ಮರವರಿಗೆ ಮಹದೇವಮ್ಮ,ಮಾದನಾಯಕ, ಚಿಕ್ಕವನಾಯಕ, ಸಣ್ಣಮ್ಮ, ದೇವಿರಮ್ಮ ಎಂಬ 5 ಜನ ಮಕ್ಕಳು ಎಂದರೆ ಸರಿ. ನನ್ನ ತಂದೆ ಕೇಲಿಗರ ಹೊಣಕಾರನಾಯಕರವರ ದತ್ತು ಪುತ್ರನಾಗಿದ್ದು ಅವರ ಮರಣ ನಂತರ ಅವರ ಆಸ್ತಿಗಳೆಲ್ಲಾ ನನ್ನ ತಂದೆ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ.

ದಾವ ಷೆಡ್ಯೂಲ್ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯರ್ಜಿತ ಆಸ್ತಿಗಳಾಗಿದ್ದು ಅವರ ಹೆಸರಿನಲ್ಲಿ ಖಾತೆ ಇದ್ದು ಅವರೇ ಸ್ವಾದೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಗಳಿಗೂ ನನಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯರ್ಜಿತ ಆಸ್ತಿಗಳಾಗಿದ್ದು, ಅವರು ತಮ್ಮ ಹಕ್ಕಿನ ಪ್ರಕಾರ ಅವರ ಮಕ್ಕಳಾದ 2 ಮತ್ತು 3ನೇ ಪ್ರತಿವಾದಿಗಳಿಗೆ ದಾನ ಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿಗಳೇ ದಾವ ಷೆಡ್ಯೂಲ್ ಆಸ್ತಿಯ ಸ್ವಾದೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಈ ಹಂತದಲ್ಲಿ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ